ಮುಂದುವರಿಸುತ್ತೀರಾ ? ಅದನ್ನು ನಂತರ ಖಾಯಂ ಮಾಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಆ ರೀತಿಯಾಗಿ ಆರ್ಡರನ್ನು ಮಾಡುವುದಕ್ಕಾಗುವುದಿಲ್ಲ. ನಾವು ಏನೇ ಇದ್ದರೂ ಸರ್ಕಾರದಿಂದ ಮಂಜೂರು ಆದ ಮೇಲೆ ಅದಕ್ಕೆ ಒಂದು ರೆಕಗ್ನಿಷನ್ ಬರುತ್ತದೆ. ಆ ಸ್ಕೂಲ್ ಆಗುತ್ತದೆ. ಸುಮ್ಮನೆ ಯಾರೋ ಹೇಳಿದರು ಎಂದು ಶಾಲೆಯನ್ನು ಪ್ರಾರಂಭ ಮಾಡಿಕೊಂಡು ಹೋಗಿ ಎಂದು ಯಾರು ಹೇಳಿದರೋ ನನಗೆ ಗೊತ್ತಿಲ್ಲ. ಆ ರೀತಿ ಹೇಳುವುದು ಸರಿಯಲ್ಲ.

ಮೈಸೂರು ನಗರದ ಕುವೆಂಪು ನಗರದಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ

232(1501)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ

ಅ) ಮೈಸೂರು ನಗರದ ಕುವೆಂಪು ನಗರದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಜಾಗ ಕೊಂಡುಕೊಳ್ಳುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ . ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು)

ಆ) ಮೈಸೂರು ನಗರದ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ನಿವೇಶನ ಪಡೆಯುವ ಅಗತ್ಯತೆ ಇಲಾಖೆಯ ಪರಿಶೀಲನೆಯಲ್ಲಿದೆ. ಸ್ವಂತ ನಿವೇಶನ ಪಡೆಯಲು ಸೂಕ್ತಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಮೈಸೂರು—ಇವರಿಗೆ ಪತ್ರ ಬರೆಯಲಾಗಿದೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ಮೈಸೂರು ನಗರಕ್ಕೆ ಒಂದು ಕಾಲೇಜನ್ನು ಮಂಜೂರು ಮಾಡಿಕೊಟ್ಟರು. ಆ ಕಾಲೇಜಿಗೆ ಪೀಠೋಪಕರಣಗಳಾಗಲಿ, ಕೊಠಡಿಗಳಾಗಲಿ ಯಾವುದೂ ಇಲ್ಲ. ಶಿಕ್ಷಣಕ್ಕೆ ಮಹತ್ವವನ್ನು ಕೊಡತಕ್ಕಂಥವರು ಈಗ ಶಿಕ್ಷೆಯನ್ನು ಕೊಡುತ್ತಿದ್ದಾರೆ. ಈ ಸರ್ಕಾರ ಎಂದರೆ ತಪ್ಪಾಗಲಾರದು. ಈಗ ಅಲ್ಲಿ ಮಕ್ಕಳೆಲ್ಲಾ ಬೀದಿಯಲ್ಲಿ ಓದುವಂತಹ ಪರಿಸ್ಥಿತಿ ನಿರ್ಮಾಣ ಆಗಿ ಅವರೆಲ್ಲಾ ನಮ್ಮ ಮನೆಯ ಮುಂದೆ ಧರಣಿ ಹೂಡುವಂತಹ ಪರಿಸ್ಥಿತಿ ಉಲ್ಬಣವಾಗಿದೆ. ಇದಕ್ಕೆ ಕಾರಣರ್ಯಾರು ? ಪೂರ್ವಾಲೋಚನೆ ಇರತಕ್ಕಂತಹ ಯಾವುದೇ ಒಬ್ಬ ವಿದ್ಯಾಮಂತ್ರಿಗಳಿಗಾಗಲಿ ಇದು ನಿಜಕ್ಕೂ ಈ ಕ್ಷೇತ್ರಕ್ಕೆ ಶೋಭೆ ತರತಕ್ಕಂಥದ್ದಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ತಾನೇ ಮಂಜೂರಾತಿಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಕಾಲೇಜಿಗೆ ಜಾಗವನ್ನು ಸಹ ಕರುಣಿಸಿಲ್ಲ. ಕೊಠಡಿಗಳನ್ನು ಕಟ್ಟುವುದಕ್ಕೆ ಮಂಜೂರಾತಿಯೂ ಇಲ್ಲ. ಪಕ್ಕದ ಹಳ್ಳಿಗಳಿಂದ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಆ ಮಕ್ಕಳೆಲ್ಲಾ ಬೀದಿಯಲ್ಲಿ ಓದತಕ್ಕಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಹೊಣೆಯಾರು ? ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು :- ಇದಕ್ಕೆ ಹೊಣೆಗಾರರೆಂದರೆ ಮುಂದೆ ಕುಳಿತಿರಕ್ಕಂತಹ ಮಾನ್ಯ ನಂಜೇಗೌಡರು ಇರಬೇಕು ಅಥವಾ ಹಿಂದೆ ಕುಳಿತಿರುವ ಬಸವರಾಜ್‌ಪಾಟೀಲರು ಇರಬೇಕು.

ಶ್ರೀ ಬಿ.ಎ.ಮೊಯಿದ್ದೀನ್ :- ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದಲ್ಲಿ 150ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇವೆ. ಪ್ರಾಯಶಃ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಕೂಡ ಪ್ರಥಮದರ್ಜೆ ಕಾಲೇಜುಗಳು ಸರ್ಕಾರದ್ದು ಇಲ್ಲ. ಇದರಲ್ಲಿ 82 ಕಾಲೇಜುಗಳಿಗೆ ನಾವು ಈಗಾಗಲೇ ಸುಸಜ್ಜಿತವಾದ ಕಟ್ಟಡಗಳನ್ನು ಒದಗಿಸಿದ್ದೇವೆ. ಮತ್ತೆ 42 ಕಾಲೇಜುಗಳಿಗೆ ಈಗಾಗಲೇ ಕಟ್ಟಡಗಳು ನಿರ್ಮಾಣದ ಹಂತದಲ್ಲಿದೆ. 16 ಕಾಲೇಜುಗಳಿಗೆ ಕಟ್ಟಡವು ಇಲ್ಲ, ಜಾಗವೂ ಇಲ್ಲ, ಅದರಲ್ಲಿ ನಿಮ್ಮ ಮೈಸೂರು ಸಹ ಒಂದು. ನಾನು ಇರತಕ್ಕಂತಹ ಚಿತ್ರವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ.

ನಾನು ನಿಮ್ಮ ಪ್ರಶ್ನೆ ಬರುವುದಕ್ಕಿಂತ ಮುಂಚೆ, ಕೂಡಲೇ ಈ ಕಾಲೇಜಿಗೆ ಸ್ಥಳವನ್ನು ಒದಗಿಸಬೇಕೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಸಧ್ಯಕ್ಕೆ ಈ ಕಾಲೇಜು ಮೂಡಾ ಕಟ್ಟಡದಲ್ಲಿ ನಡೆಯುತ್ತಿದೆ. ನನಗೆ ಗೊತ್ತಿರುವ ಹಾಗೆ ಮೂಡಾ ಬಿಲ್ಡಿಂಗ್ ಬಹಳ ದೊಡ್ಡದು ಇದೆ. ಅಲ್ಲಿ ಕಾಲೇಜು ನಡೆಯುತ್ತಿದೆ. ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡು ಇವತ್ತೇ ಡಿಸ್ಟ್ರಿಕ್ಟ್ ಅಥಾರಿಟಿಯವರಿಗೆ ಹೇಳಿ ಕೂಡಲೇ ನಿಮಗೆ ಜಾಗವನ್ನು ಕೊಡಿಸತಕ್ಕಂತಹ ಕೆಲಸವನ್ನು ಮಾಡುತ್ತೇನೆ. ಇದರ ಜೊತೆಗೆ ತಾವು ಕೂಡ ಜಿಲ್ಲಾಧಿಕಾರಿಯವರ ಹತ್ತಿರ ಸಹಕರಿಸಬೇಕು ಎನ್ನುವ ವಿಚಾರವನ್ನು ಸೂಚ್ಯವಾಗಿ ನಿಮಗೆ ತಿಳಿಸುತ್ತಿದ್ದೇನೆ. ಈ ವಿಚಾರ ತಮಗೆ ಗೊತ್ತಿದೆ

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಧನ್ಯವಾದಗಳು. ಬರೀ ಜಾಗವನ್ನು ಕೊಟ್ಟರೆ ಸಾಲದು ಕಟ್ಟಡವೂ ಸಹ ಆಗಬೇಕು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದಕ್ಕೆ ಹಣವನ್ನು ಮಂಜೂರು ಮಾಡಬೇಕು.

ಒಂದರಿಂದ ಏಳನೇ ತರಗತಿವರೆಗೆ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಿಕ್ಷಣ ನೀಡುವುದು

233(1527)

ಶ್ರೀ. ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ 1ನೇ ತರಗತಿಯಿಂದ 7ರ ವರೆಗೆ ಕನ್ನಡ ಮಾಧ್ಯಮ ಮಾಡಲು ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ , ಈಗಾಗಲೇ ಇಂಗ್ಲೀಷ್ ಮತ್ತು ಇತರೆ ಮಾಧ್ಯಮಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ .ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಮತ್ತು ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ. ಅರಗ ಜ್ಞಾನೇಂದ್ರ :- ರಾಜ್ಯದಲ್ಲಿ ಒಂದನೇ ತರಗತಿಯಿಂದ 7ರವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುತ್ತೇವೆಂದು ಇತ್ತೀಚೆಗೆ ಮಾನ್ಯಸಚಿವರು ಎಲ್ಲಾ ಕಡೆ ಹೇಳುತ್ತಿದ್ದಾರೆ. ಇದರ ಪ್ರಚಾರದಿಂದ ಸಾಕಷ್ಟು ಜನ ಪೋಷಕರು ಗೊಂದಲಕ್ಕೆ ಒಳಗಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 3000ಕ್ಕಿಂತ ಹೆಚ್ಚು ಕನ್ನಡ ಮಾಧ್ಯಮವಲ್ಲದ ಶಾಲೆಗಳು ಕಾರ್ಯನಿರ್ವಹಿಸುತ್ತಿದೆ ಎನ್ನುವುದನ್ನು ನಾವು ಕೇಳಿದ್ದೇವೆ. ಇಂತಹ ಸಂದರ್ಭದಲ್ಲಿ 7ನೇ ತರಗತಿಯವರೆಗೆ ಏಕಾಏಕಿಯಾಗಿ ಕನ್ನಡವನ್ನು ಕಡ್ಡಾಯ ಮಾಡಿದರೆ 5ಮತ್ತು 6ನೇ ತರಗತಿಯವರಿಗೆ ಬೇರೆ ಬೇರೆ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆದಿರತಕ್ಕಂತಹ ಮಕ್ಕಳಿಗೆ ಏನು ವ್ಯವಸ್ಥೆಯನ್ನು ಮಾಡಬೇಕೆಂದು ಯೋಚನೆ ಮಾಡಿದ್ದೀರಿ ಎನ್ನುವಂತದ್ದು ನನ್ನ ಪ್ರಶ್ನೆ. ಸೆಂಟ್ರಲ್ ಸಿಲಬಸ್‌ನಲ್ಲಿ ಓದುತ್ತಿರುವಂತಹ ಮಕ್ಕಳಿಗೆ, ಬೇರೆ ಬೇರೆ ರಾಜ್ಯದಿಂದ ಬಂದಿರತಕ್ಕಂತಹ ಮಕ್ಕಳಿಗೆ ಯಾವ ಸೌಲಭ್ಯವನ್ನು ಇದರಲ್ಲಿ ವಿಸ್ತರಿಸುತ್ತೀರಿ ಎಂಬುದನ್ನು ಕೂಡ ತಾವು ಹೇಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ .ಹೆಚ್. ಜಿ. ಗೋವಿಂದೇ ಗೌಡ :- ಮಾನ್ಯ ಸಭಾಧ್ಯಕ್ಷರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ ॥ ಚಂದ್ರಶೇಖರ ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುತ್ತೇವೆ. ಆ ಸಮಿತಿಯು ಒಂದರಿಂದ 7ರವರೆಗೆ ಮಾತೃಭಾಷೆ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುವಂತೆ